(ಇಂದು ದಿನಾಂಕಃ 21-02-2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ.ಬಿ ಎಸ ಎದುರುದಾರರ ಪರ ವಕೀಲರಿಂದಃ**

1. ನನ್ನ ತಂದೆಯ ಹೆಸರು ಫಕಿರಪ್ಪ ತಾಯಿಯ ಹೆಸರು ಸುಭದ್ರಮ್ಮ ಇರುತ್ತದೆ. ನಾವು 3 ಜನ ಮಕ್ಕಳಿರುತ್ತೇವೆ ನನ್ನ ಅಕ್ಕ ತೀರಿಕೊಂಡಿರುತ್ತಾರೆ. ನಾವು ಅಣ್ಣ ತಮ್ಮಂದಿರು ಪಾಲುಗಾರಿಕೆ ಮಾಡಿಕೊಂಡಿದ್ದೇವೆ. ನನ್ನ ತಾಯಿ ನನ್ನ ತಮ್ಮನ ಹತ್ತಿರ ಇರುತ್ತಾರೆ. ನನ್ನ ತಮ್ಮನ ಹೆಸರು ಶಿವಕುಮಾರ ಇರುತ್ತದೆ. ನನ್ನ ತಂದೆ ಅವರು 1993 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಬದುಕಿದ್ದಾಗಲೆ ಪಾಲು ವಿಭಾಗ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಅವರು ತೀರಿಕೊಂಡ ನಂತರ ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಹೇಳುತ್ತಾರೆ.

2. ನನ್ನ ಮದುವೆ ಆಗುವ ಮೊದಲೆ ನಾವು ಅಣ್ಣ ತಮ್ಮಂದಿರು ಪಾಲು ಮಾಡಿಕೊಂಡಿದ್ದೆವು. ನನ್ನ ಮದುವೆ ಆದ ನಂತರ ನಾನು ಉಡುಪಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಉಡುಪಿಯಲ್ಲಿ 2012-2013 ರಲ್ಲಿ ಕೆಲಸ ಮಾಡಿರುತ್ತೇನೆ. 2013 ರಿಂದ ನಾನು ಬಾಗಲಕೋಟೆಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಸಹಾಯಕ ಬ್ಯಾಟಮೆಂಟನ ಕೋಚ ಎಂದು ಕೆಲಸ ಮಾಡುತ್ತಿದ್ದೆ. ನಾನು ಮದುವೆ ಆದ ನಂತರ ಉಡುಪಿಯಲ್ಲಿ ಮತ್ತು ಬಾಗಲಕೋಟೆಯಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಮದುವೆ ಆಗಿ ಒಂದುವರೆ ತಿಂಗಳ ನಂತರ ನಾನು ಉಡುಪಿಗೆ ಕೆಲಸ ಮಾಡಲು ಹೋಗಿದ್ದೆ. ನಾನು ಉಡುಪಿಯಲ್ಲಿ ನನ್ನಹೆಂಡತಿಗೆ ಕರೆದುಕೊಂಡು ಹೋಗಿದ್ದೆ. ಉಡುಪಿಯಲ್ಲಿ ನಾನು ಮತ್ತು ನನ್ನ ಹೆಂಡತಿ ಒಂದುವಾರ ಇದ್ದೆವು ನನ್ನ ಹೆಂಡತಿ ಗರ್ಭಿಣಿಯಾಗಿದ್ದರಿಂದ ಅವಳು ಊರಿಗೆ ಬಂದಳು ನಾನು ಉಡುಪಿಯಲ್ಲಿ ಇದ್ದೆನು. ಹೆರಿಗೆ ಆದ ನಂತರ ನಾನು ಬಾಗಲಕೋಟಿಗೆ ಹೋಗಿರುತ್ತೇನೆ. ಉಡುಪಿಯಲ್ಲಿರುವ

ಕೆಲಸವನ್ನು ನಾನು ಬಿಟ್ಟಿರುತ್ತೇನೆ. ನಾನು ಉಡುಪಿಯಲ್ಲಿರುವ ಕೆಲಸವನ್ನು ಯಾಕೆ ಬಿಟ್ಟೆ ಎಂದರೆ ಸಾಕ್ಷಿ ನನ್ನ ಸ್ನೇಹಿತ ಒಬ್ಬ ಅಕಾಡೆಮೀ ಮಾಡುತ್ತಿದ್ದು ನನ್ನ ಜೊತೆ ಬಂದು ಕೆಲಸ ಮಾಡು ಎಂದು ಹೇಳಿದ್ದರಿಂದ ನಾನು ಉಡುಪಿಯಲ್ಲಿರುವ ಕೆಲಸವನ್ನು ಬಿಟ್ಟಿರುತ್ತೇನೆ. ಮೊದಲನೇಯ ಮಗು ಹುಟ್ಟಿದ ನಂತರ ಬಾಗಲಕೋಟೆಗೆ ಹೋದೆವು. ಬಾಗಲಕೋಟೆಯಲ್ಲಿ ಒಂದು ವರ್ಷ ನಾನು ಮತ್ತು ನನ್ನ ಹೆಂಡತಿ ಒಟ್ಟಿಗೆ ಇದ್ದೆವು. ಬಾಗಲಕೋಟೆಯಲ್ಲಿ ಒಂದು ವರ್ಷ ಕೆಲಸ ಮಾಡಿದ ನಂತರ ನಾನು ಅಡವಿಗೆ ಹೋದೆನು. ಅಡವಿಯಲ್ಲಿ 2-3 ವರೆ ವರ್ಷ ಇದ್ದೆ ಅಲ್ಲಿ ನಾನು ಒಬ್ಬನೆ ಇದ್ದೆ. ಅಡವಿಯಲ್ಲಿ 2-3 ವರೆ ವರ್ಷ ಇದ್ದೆ ಎಂದು ನನ್ನ ಅರ್ಜಿಯಲ್ಲಿ ಮತ್ತು ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿಯಾಕೆ ಬರೆದಿಲ್ಲ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಎಂದು ಬರೆದಿಲ್ಲ ಎಂದು ಹೇಳುತ್ತಾರೆ. ನಾನು 2-3 ವರೆ ವರ್ಷಅಡವಿಯಲ್ಲಿದ್ದಾಗ ನನ್ನ ಕುಟುಂಬ ಎಲ್ಲಿ ಇತ್ತು ಎಂದರೆ ಸಾಕ್ಷಿ ಅವಳು ತವರು ಮನೆಯಲ್ಲಿ ಇದ್ದಳು ಎಂದು ಹೇಳುತ್ತಾರೆ. ಅಡವಿಯಿಂದ ನಾನು ಬೆಂಗಳೂರಿಗೆ ಹೋಗಿರುತ್ತೇನೆ.

3. ಕುಂಚಾವರಂ ಪೋಲಿಸ ಠಾಣೆಯಲ್ಲಿ 2015 ರಲ್ಲಿ ಮಕ್ಕಳ ಮಾರಾಟದ ಬಗ್ಗೆ ಒಂದು ಪ್ರಕರಣ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಪೋಲಿಸರು ಯಾವ ಯಾವ ವ್ಯಕ್ತಿಗಳನ್ನು ಆರೋಪಿತರನ್ನಾಗಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸೋದರ ಅತ್ತೆಯ ಮಗಳನ್ನು ಆ ಪ್ರಕರಣದಲ್ಲಿ ಪೋಲಿಸರು ಅವಳನ್ನು ಆರೋಪಿತರನ್ನಾಗಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ಅವಳನ್ನು ಅಂಗನವಾಡಿ ಕೆಲಸದಿಂದ ತೆಗೆದು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಕಾರಣದಿಂದ ನಾನು ಅತ್ತೆಯ ಮಗಳನ್ನು ನೋಡಿಕೊಳ್ಳಲು ಮತ್ತು ಅವಳನ್ನು ಮುಚ್ಚಿಡಲು 2-3 ವರೆ ವರ್ಷ ಅವಳ ಜೊತೆ ಇದ್ದು, 2-3 ವರೆ ವರ್ಷ ಅಡವಿಯಲ್ಲಿ ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಉಡುಪಿ ಮತ್ತು ಬಾಗಲಕೋಟೆಯಿಂದ ನಾನು ಬಂದ ನಂತರ ನನ್ನಹೆಂಡತಿ ತನ್ನ ತವರು ಮನೆಯಲ್ಲಿ ಇರುತ್ತಿದ್ದಳು ಎಂದರೆ ಸರಿ. ನನ್ನಹೆಂಡತಿ ತನ್ನ ತವರು ಮನೆಯಲ್ಲಿ ಇರುತ್ತಿದ್ದಳು ಆದ್ದರಿಂದ ಅವಳು ನನ್ನ ತಂದೆ -ತಾಯಿಗೆ ಮತ್ತು ನನಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಡುವ ಪ್ರಶ್ನೆಬರುವುದಿಲ್ಲ ಎಂದರೆ ಸಾಕ್ಷಿ ಮಾನಸಿಕವಾಗಿ ಕಿರುಕುಳ ಕೊಟ್ಟಿರುತ್ತಾರೆ, ಪೋನ ಮಾಡಿ ಬೈಯ್ಯುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಅರ್ಜಿಯಲ್ಲಿ ಮತ್ತು ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ನನಗೆ ನನ್ನ ಹೆಂಡತಿ ಯಾವ ವರ್ಷದಲ್ಲಿ ಯಾವ ದಿನಾಂಕದಂದು ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಟ್ಟಿರುತ್ತಾಳೆ ಎಂದು ಬರೆದಿಲ್ಲ ಎಂದರೆ ಸರಿ. ನನ್ನ ಹೆಂಡತಿ ನನಗೆ ಯಾವುದೇ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಟ್ಟಿಲ್ಲ ಆದ್ದರಿಂದ ನಾನು ಬರೆದಿಲ್ಲ ಎಂದರೆ ಸರಿಯಲ್ಲ.

5.ನನ್ನ ಹೆಂಡತಿಯನ್ನು ಕರೆದುಕೊಂಡು ಬರಲು ನಾನು ಯಾವ ದಿನಾಕದಂದು ಸಾಸರ ಗಾವಗೆ ಹೋಗಿದ್ದೆ ಎಂದು ಬರೆದಿಲ್ಲ ಎಂದರೆ ಸರಿ. ಸಾಸರಗಾವ ಊರಿಗೆ ಯಾರು ಯಾರು ಪಂಚಾಯಿತಿ ಮಾಡಲು ಹೋಗಿದ್ದೆವು ಎಂದು ಬರೆದಿಲ್ಲ ಎಂದರೆ ಸರಿ. ನಾನು ಯಾವ ದಿನಾಂಕದಂದು ದೂರು ಕೊಟ್ಟಿದ್ದೆ ಮತ್ತು ಯಾವ ದಿನಾಂಕದಂದು ಪೋಲಿಸರು ನಮ್ಮನ್ನು ಕರೆದಿದ್ದರು ಎಂದು ಬರೆದಿಲ್ಲ ಎಂದರೆ ಸರಿ. ನಾನು ದೂರು ಕೊಟ್ಟ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮುಚ್ಚಳಿಕೆಯನ್ನು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಯಾವ ದಿನಾಂಕದಂದು ಮುಚ್ಚಳಿಕೆ ಬರೆದಿದುಕೊಟ್ಟಿದ್ದರು ಮತ್ತು ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಯಾವುದೇ ದೂರು ಕೊಟ್ಟಿಲ್ಲ, ಮುಚ್ಚಳಿಕೆ ಇರುವುದಿಲ್ಲ ಆದ್ದರಿಂದ ಅದರ ದಿನಾಂಕ ಮತ್ತು ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಸರಗಾವಗೆ ಹೋಗಿ ಪಂಚಾಯಿತಿ ಮಾಡುವಾಗ ನನ್ನ ಹೆಂಡತಿಯವರ ಮನೆಯವರು ನನಗೆ ಹೊಡೆದರು ಎಂದು

ನಾನು ಯಾವುದೇ ದೂರು ಕೊಟ್ಟಿಲ್ಲ. ಆ ರೀತಿ ನನಗೆ ಅವರು ಹೊಡೆದಿಲ್ಲ ಆದ್ದರಿಂದ ನಾನು ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ಯಾವ ತರಗತಿಯಲ್ಲಿ ಡಿಗ್ರಿ ಓದುತ್ತಿದ್ದಳು ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ಅವಳು ಧರಂಸಿಂಗ ಡಿಗ್ರಿಕಾಲೇಜಿನಲ್ಲಿ ಡಿಗ್ರಿ ಮುಗಿಸಿರುತ್ತಾಳೆ. ಅವಳು ಧರಂಸಿಂಗ ಡಿಗ್ರಿಕಾಲೇಜಿನಲ್ಲಿ ಡಿಗ್ರಿ ಮುಗಿಸಿರುತ್ತಾಳೆ ಎಂದು ನನ್ನ ಅರ್ಜಿಯಲ್ಲಿ ಬರೆದಿಲ್ಲ ಎಂದರೆ ಸರಿ. ನನ್ನ ಹೆಂಡತಿ ಡಿಗ್ರಿ ಮುಗಿಸಿದ ನಂತರ ನಾನು ಯಾವ ವರ್ಷದಲ್ಲಿ ಅವಳನ್ನು ಕರೆಯಲು ಹೋಗಿದ್ದೆ ಎಂದರೆ ಸಾಕ್ಷಿ ಜೂನ ತಿಂಗಳಿನಲ್ಲಿ 2014 ರಲ್ಲಿ ಹೋಗಿದ್ದೆ ಎಂದು ಹೇಳುತ್ತಾರೆ. ಈ ದಿನಾಂಕವನ್ನು ನಾನು ನನ್ನ ಅರ್ಜಿಯಲ್ಲಿ ಯಾಕೆ ಬರೆದಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇರಲಿಲ್ಲ ಆದ್ದರಿಂದ ಬರೆದಿಲ್ಲ ಎಂದು ಹೇಳುತ್ತಾರೆ. 2014 ರಲ್ಲಿ ಅವಳನ್ನು ಕರೆಯಲು ಹೋಗಿದರು ಸಹ 2019 ರವರೆ ನಾನು ಯಾಕೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ 2015-16 ರಲ್ಲಿ ನಾನು ಅಡವಿಯಲ್ಲಿ ಇದ್ದೆ, ಅಲ್ಲಿಂದ ಎಲ್ಲರೂ ನನಗೆ ಊರಿಗೆ ಬರಲು ಹೇಳಿದರು ನಾನು ಬಂದೆ, ನಂತರ ಅವಳನ್ನು ಕರೆಯಲು ಹೋದೆ ಅವಳು ಬರಲಿಲ್ಲ, ಮತ್ತೆ ನಾನು ಬೆಂಗಳೂರಿಗೆ ಹೋದೆ, ಮತ್ತೆ ಅವಳನ್ನು ಕರೆಯಲು ಹೋದೆ ಅವಳು ಬರಲಿಲ್ಲ ಅವಳು ಬರುವುದಿಲ್ಲ ಎಂದು ಹೇಳಿದ್ದರಿಂದ ನಾನು ಡಿಓರ್ಸ ಅರ್ಜಿ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. 2014 ರಲ್ಲಿ ಅವಳನ್ನು ಕರೆಯಲು ಹೋಗಿದರು ಸಹ 2019 ರವರೆ ನಾನು ಯಾಕೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ 2015-16 ರಲ್ಲಿ ನಾನು ಅಡವಿಯಲ್ಲಿ ಇದ್ದೆ, ಅಲ್ಲಿಂದ ಎಲ್ಲರೂ ನನಗೆ ಊರಿಗೆ ಬರಲು ಹೇಳಿದರು ನಾನು ಬಂದೆ, ನಂತರ ಅವಳನ್ನು ಕರೆಯಲು ಹೋದೆ ಅವಳು ಬರಲಿಲ್ಲ, ಮತ್ತೆ ನಾನು ಬೆಂಗಳೂರಿಗೆ ಹೋದೆ, ಮತ್ತೆ ಅವಳನ್ನು ಕರೆಯಲು ಹೋದೆ ಅವಳು ಬರಲಿಲ್ಲ ಅವಳು ಬರುವುದಿಲ್ಲ ಎಂದು ಹೇಳಿದ್ದರಿಂದ ನಾನು ಡಿಓರ್ಸ ಅರ್ಜಿ ಸಲ್ಲಿಸಿರುತ್ತೇನೆ ಎಂದು ನನ್ನ ಅರ್ಜಿಯಲ್ಲಿ ಏಕೆ ಬರೆದಿಲ್ಲ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಆದ್ದರಿಂದ ಬರೆದಿಲ್ಲ ಎಂದು ಹೇಳುತ್ತಾರೆ.

2019 ರಲ್ಲಿ ನನ್ನ ಹೆಂಡತಿ ನನಗೆ ಬೇಕು ಅಂತಾ ಯಾಕೆ ಅರ್ಜಿ ಸಲ್ಲಿಸಿಲ್ಲ, ವಿಚ್ಛೇದನ ಅರ್ಜಿ ಯಾಕೆ ಸಲ್ಲಿಸಿದೆ ಎಂದರೆ ಸಾಕ್ಷಿ ಈ ರೀತಿ ಡಿರ್ಓಸ ಅರ್ಜಿ ಸಲ್ಲಿಸಿದರೆ ಬರಬಹುದು ಅಂತಾ ವಿಚ್ಛೇದನ ಅರ್ಜಿ ಸಲ್ಲಿಸಿದೆ ಎಂದು ಹೇಳುತ್ತಾರೆ.

6. ನಾನು ನನಗೆ ಬಂದ ಹೊಲವನ್ನು ಬೇರೆಯವರಿಗೆ ಮಾರಾಟ ಒಪ್ಪಂದ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ನನ್ನ ತಮ್ಮ ತೀರಿಕೊಂಡಾಗ ನಾನು ಸಾಲ ಬಾಧೆಯಿಂದ ನನ್ನ ತಮ್ಮ ತೀರಿಕೊಂಡಿರುತ್ತಾನೆ ಎಂದು ಮಾರಾಟ ಒಪ್ಪಂದ ಕರಾರು ಪತ್ರ ತೋರಿಸಿ ಸರಕಾರದಿಂದ ರೂ.2,00,000/- ಪರಿಹಾರದ ಹಣ ಪಡೆದಿರುತ್ತೇನೆ ಎಂದರೆ ಸರಿ. 2014 ರ ರಿಂದ ನಾನು ಮತ್ತು ನನ್ನ ಹೆಂಡತಿ ದೂರ ಇದ್ದಿರುತ್ತೇವೆ. ಯಾವ ತಿಂಗಳಿಂದ ದೂರ ಇದ್ದೆವೆ ಎಂದು ನನಗೆ ನೆನಪಿಲ್ಲ. ಶಾಂತಕುಮಾರ ತಂದೆ ಫಕಿರಪ್ಪ ಕನಕಟ ವಾಸ ಶಾದಿಪೂರ ಎಂದರೆ ನಾನು. ನನ್ನ ಹಾಗೂ ನನ್ನ ಹೆಂಡತಿಯ ನಡುವೆ ಜಗಳ ಆದ ತಿಂಗಳು ಮತ್ತು ದಿನಾಂಕ ನನಗೆ ನೆನಪಿಲ್ಲ. ಸುಭದ್ರಮ್ಮ ಗಂಡ ಫಕಿರಪ್ಪ ಕನಕಟ ವಾಸ ಶಾದಿಪೂರ ಎಂದರೆ ನನ್ನ ತಾಯಿ. ನನ್ನ ತಾಯಿ ಹೆಬ್ಬೆಟ್ಟಿನ ಗುರುತು ಹಾಕುತ್ತಾರೆ. ನನಗೆ ಕೆಟ್ಟ ಚಟ ಇರುತ್ತದೆ ಎಂದು ನನ್ನ ಹೆಸರಿನಲ್ಲಿ ಇರುವ ಜಮೀನು ಯಾರಿಗೂ ವರ್ಗಾವಣೆ ಮಾಡಬಾರದು ಎಂದು ನನ್ನ ತಾಯಿ ಮತ್ತು ನನ್ನ ಹೆಂಡತಿ ತಹಸಿಲ್ದಾರ ಕಛೇರಿಗೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಯಾವ ಕೆಟ್ಟ ಚಟಗಳಿವೆ ಎಂದು ನನ್ನ ತಾಯಿಗೆ ಗೊತ್ತಿರುತ್ತದೆ ಎಂದರೆ ಸರಿ. ಜಮೀನಿಗೆ ಸಂಬಂಧ ಪಟ್ಟಂತೆ ಯಾವುದೆ ವರ್ಗಾವಣೆ ಜಾರಿಯಲ್ಲಿ ಇಲ್ಲ ಎಂದು ತಹಸಿಲ್ದಾರ ಕಛೇರಿಯವರು ನನ್ನ ಹೆಂಡತಿಗೆ ಮತ್ತು ನನ್ನ ತಾಯಿಗೆ ಹಿಂಬರಹ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

7. ನನಗೆ ಪಾರ್ಸಿಯಾ ಡಿಸೋಜಾ, ಆಬಾ ಪರಾತೆ, ಮತ್ತು ಶ್ರೇಯಾ ಎಂಬುವವರ ಪರಿಚಯ ಇದೆ. ನನಗೆ ಪಾರ್ಸಿಯಾ ಡಿಸೋಜಾ, ಅಂಬಾ ಪರಾತೆ, ಮತ್ತು ಶ್ರೇಯಾ

ಎಂಬುವವರ ಹೇಗೆ ಪರಿಚಯ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಆಬಾ ಪರಾತೆ ನನ್ನ ಸಹೋದ್ಯೋಗಿ ಆಗಿ ಕೆಲಸ ಮಾಡುತ್ತಿದ್ದಳು, ಶ್ರೇಯಾ ಬಾಗಲಕೋಟೆಯಲ್ಲಿ ನನ್ನ ವಿದ್ಯಾರ್ಥಿಯಾಗಿದ್ದಳುಮತ್ತು ಪಾರ್ಸಿಯಾ ಡಿಸೋಜಾ ನನಗೆ ಆಬಾ ಪರಾತೆಯವರಿಂದ ಪರಿಚಯ ಎಂದು ಹೇಳುತ್ತಾರೆ. ಈ 3 ಜನ ನನಗೆ 2016 ಸೆಪ್ಟೆಂಬರ ಅಕ್ಟೋಬರದಿಂದ ಪರಿಚಯ ಎಂದು ಹೇಳುತ್ತಾರೆ. 2013-14 ರಲ್ಲಿ ನನ್ನ ಮೋಬೈಲ ನಂಬರ 9632894647 ಇತ್ತು. ನನಗೆ ಪಾರ್ಸಿಯಾ ಡಿಸೋಜಾ, ಆಬಾ ಪರಾತೆ, ಮತ್ತು ಶ್ರೇಯಾ ರವರ ಮೊಬೈಲ ಸಂಖ್ಯೆ ನೆನಪಿಲ್ಲ. ಈಗ ಪಾರ್ಸಿಯಾ ಡಿಸೋಜಾ, ಆಬಾ ಪರಾತೆ, ಮತ್ತು ಶ್ರೇಯಾ ಎಲ್ಲಿ ಇದ್ದಾರೆ ಎಂದರೆ ಸಾಕ್ಷಿ ಆಬಾ ಬೆಂಗಳೂರಿನಲ್ಲಿ ಇದ್ದಾಳೆ, ಶ್ರೇಯಾ ಎಲ್ಲಿದ್ದಾಳೆ ಎಂದು ನನಗೆ ಗೊತ್ತಿಲ್ಲ ಮತ್ತು ಪಾರ್ಸಿಯಾ ಡಿಸೋಜಾ ಎಲ್ಲಿದ್ದಾಳೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಫೋಟೊವನ್ನು ತೋರಿಸಿದ್ದು ಸಾಕ್ಷಿ ಆ ಫೋಟೊವನ್ನು ನೋಡಿ ಅದರಲ್ಲಿ ಸುಜನಡಿಸೋಜಾ ಮತ್ತು ಆಬಾರವರ ಅಮ್ಮ ಮತ್ತು ನಾನು ಇದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಆ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಆರ -1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೊವನ್ನು ತೋರಿಸಿದ್ದು ಸಾಕ್ಷಿ ಆ ಫೋಟೊವನ್ನು ನೋಡಿ ಅದರಲ್ಲಿ ಪಿಂಕ ಡ್ರೇಸ ಹಾಕಿದ ಹುಡುಗಿ ಶ್ರೇಯಾ ಇರುತ್ತಾರೆ. ಸಾಕ್ಷಿ ಆ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಆರ -2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೊವನ್ನು ತೋರಿಸಿದ್ದು ಸಾಕ್ಷಿ ಆ ಫೋಟೊವನ್ನು ನೋಡಿ ಅದರಲ್ಲಿ ರಾಬಿನ ಉತ್ತಪ್ಪಾ ಮತ್ತು ನಾನು ಇದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿ ಆ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಆರ-3 ಎಂದು ಗುರುತಿಸಲಾಯಿತು.ಇನ್ನೊಂದು ಫೋಟೊವನ್ನು ತೋರಿಸಿದ್ದು ಸಾಕ್ಷಿ ಆ ಫೋಟೊವನ್ನು ನೋಡಿ ಅದರಲ್ಲಿ ನಾನು ಆಬಾ ಮತ್ತು ಡಿಸೋಜಾ ಇದ್ದೆವೆ ಎಂದು ಹೇಳುತ್ತಾರೆ. ಸಾಕ್ಷಿ ಆ ಫೋಟೋವನ್ನು ನೋಡಿ ಗುರುತಿಸಿದ್ದು

ಅದನ್ನು ನಿ.ಆರ-4 ಎಂದು ಗುರುತಿಸಲಾಯಿತು. ಈ ಫೋಟೊಗಳು 2023 ರಲ್ಲಿ ನನ್ನ ಮೊಬೈನಲ್ಲಿ ಇದ್ದ ಫೋಟೋಗಳು ಆಗಿರುತ್ತವೆ ಎಂದರೆ ಸರಿ. ಶ್ರೇಯಾ ಎಂಬ ಹುಡುಗಿಯ ಮೊಬೈಲ ನಂಬರ 2017 ರಲ್ಲಿ 9110615188 ಇತ್ತು ಎಂದರೆ ನನಗೆ ನೆನಪಿಲ್ಲ. ಪಾರ್ಸಿಯಾ ಡಿಸೋಜಾರವರ ಮೊಬೈಲ ನಂಬರ 2018 ರಲ್ಲಿ 9738485385 ಮತ್ತು 8762024910 ಇತ್ತು ಎಂದರೆ ನನಗೆ ನೆನಪಿಲ್ಲ. ಸೋಮವಾರ ದಿಃ07-08-2017 ರಂದು ಜಯಪ್ರಕಾಶರವರು ಅಂದರೆ ಶ್ರೇಯಾರವರ ತಂದೆ ನನ್ನ ಹೆಂಡತಿಗೆ ಫೋನ ಮಾಡಿ ನಿನ್ನ ಗಂಡ ನನ್ನ ಮಗಳ ಜೊತೆ ಓಡಾಡುತ್ತಿದ್ದಾನೆ ಎಂದು ವಾರ್ನ ಮಾಡಿದ್ದರ ಎಂದರೆ ನನಗೆ ಗೊತ್ತಿಲ್ಲ. ದಿಃ08-08-2017 ರಂದು ಮಂಗಳವಾರ ಬೆಳಗ್ಗೆ 8ಃ54 ರಂದು ಜಯಪ್ರಕಾಶರವರು ನನ್ನ ಹೆಂಡತಿಗೆ ಫೋನ ಮಾಡಿ ನಿನ್ನ ಗಂಡ ನನ್ನ ಮಗಳು ಶ್ರೆಯಾಳನ್ನು ಬ್ಲಾಕಮೇಲ ಮಾಡುತ್ತಿದ್ದಾನೆ ಎಂದು ಹೇಳಿ ನಿನ್ನ ಗಂಡನ ಮೇಲೆ ಕೇಸ ಮಾಡುತ್ತೇನೆ ಎಂದಕು ನನ್ನ ಹೆಂಡತಿಗೆ ಹೇಳಿದರು ಎಂದರೆ ನನಗೆ ಗೊತ್ತಿಲ್ಲ, ಅವರು ತನ್ನ ಮೊಬೈಲನಂಬರ 7353988996 ಫೋನಿನಿಂದ ಕರೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.